ಅನುಭವ ಕಥನ

# ಸಾವಿನ ಕನ್ನಡಿ



**ಕರೀಗೌಡ**

ಕಲೆ: ಬಸವರಾಜ ಕಲೆಗಾರ

ತಾನು–ತನ್ನದು ಎನ್ನುವ ಅಹಂಭಾವದ ಜೊತೆಗೆ ಜೀವನ ನಡೆಸುವ ನಮಗೆ, ‘ನಾವೆಲ್ಲ ಮನುಷ್ಯರು’ ಎಂದು ನೆನಪಾಗುವುದು ಸಾವಿನ ಕನ್ನಡಿ ಮುಂದೆ ನಿಂತಾಗ ಮಾತ್ರವಾ? ಉತ್ತರಾಖಂಡದಲ್ಲಿ ಮೇಘಸ್ಫೋಟ ಸಂಭವಿಸಿ ಉಂಟಾದ ದುರಂತದ ಸಂದರ್ಭದಲ್ಲಿ, ಕನ್ನಡಿಗರ ರಕ್ಷಣೆಗೆ ಧಾವಿಸಿದ್ದ ಭಾರತೀಯ ಆಡಳಿತ ಸೇವೆಯಲ್ಲಿರುವ ಅಧಿಕಾರಿಯ ನೆನಪುಗಳ ಈ ಅನುಭವ ಕಥನ ಮನುಷ್ಯನ ಸಣ್ಣತನ ಹಾಗೂ ಘನತೆ ಎರಡನ್ನೂ ಕಾಣಿಸುವಂತಿದೆ.

ಉದುರಿ ಬಿದ್ದ ಬಹು ಮಹಡಿ ಕಟ್ಟಡದ ಅವಶೇಷಗಳ ಅಡಿಯಲ್ಲಿ ಮಿಸುಕಾಡಲೂ ಒಂದಿಂಚೂ ಜಾಗ ಇಲ್ಲದ ಕಡೆ ಏಳು ವರ್ಷದ ಪುಟ್ಟ ಬಾಲಕಿ ನಾಲ್ಕು ವರ್ಷದ ತಮ್ಮನ ತಲೆಗೆ 17 ಗಂಟೆಗಳ ಕಾಲ ಕೈ ಅಡ್ಡ ಹಿಡಿದೇ ಮಲಗಿದ್ದಾಳೆ. ಹೃದಯ ಹಿಂಡುವ ಈ ಚಿತ್ರ ವಾಟ್ಸಾಪ್ ತುಂಬಾ ಹರಿದಾಡಿತ್ತು. ಸುಂದರ ದೇಶ ಟರ್ಕಿ, ಪಕ್ಕದ ಸಿರಿಯಾವನ್ನು ಅಪ್ಪಿ ಅಲುಗಾಡಿಸಿದ ಭೂಕಂಪದ ಗರ್ಭದಿಂದ ಎದ್ದು ವಾಟ್ಸಾಪ್ ತುಂಬಿಕೊಳ್ಳುತ್ತಿದ್ದ ಇಂಥವೇ ಮನಕಲಕುವ ಚಿತ್ರಗಳು ದೇಶ, ಗಡಿ, ಭಾಷೆ, ಧರ್ಮದ ಹಂಗಿಲ್ಲದೆ ಹೃದಯಗಳನ್ನೆಲ್ಲಾ ತೇವಗೊಳಿಸುತ್ತಿದ್ದವು. ಅವಶೇಷಗಳಡಿಯಿಂದ ಆಚೆ ಸರಕ್ಕನೆ ಜಾರಿ ಬಿದ್ದ ಸತ್ತ ಮಗಳ ಕೈಯನ್ನು ಜೀವಂತ ಹೆಣವಾಗಿದ್ದ ಅಪ್ಪ ಸವರುತ್ತಾ ಕುಳಿತಿದ್ದ. ಹದಿನೇಳು ದಿನಗಳ ಬಳಿಕ ಬದುಕಿ ಹೊರಗೆ ಬಂದ ಅಜ್ಜಿ ತನ್ನನ್ನು ಸಾವಿನ ಮನೆಯಿಂದ ಕೈ ಹಿಡಿದು ಹೊರಗೆ ಕರೆ ತಂದ ರಕ್ಷಣಾ ತಂಡದಲ್ಲಿದ್ದ ಭಾರತೀಯ ಯೋಧೆಯನ್ನು ಅಪ್ಪಿ ಮುದ್ದಾಡುತ್ತಿದ್ದಳು, ಆಗರ್ಭ ಶ್ರೀಮಂತ ಕ್ಷಣ ಮಾತ್ರದಲ್ಲಿ ತನ್ನ ಅಪಾರ ಹಣ-ಆಸ್ತಿಯ ಜೊತೆಗೆ ಕುಟುಂಬದ ಎಲ್ಲರನ್ನೂ ಕಳೆದುಕೊಂಡು ನಿರಾಶ್ರಿತರ ಸಾಲಲ್ಲಿ ನಿಂತು ತುಂಡು ಬ್ರೆಡ್ಡನ್ನು ಕಣ್ಣೀರಿನ ಜತೆಗೆ ಬಾಯಿಗೆ ಇಳಿಸುತ್ತಿದ್ದ ದೃಶ್ಯಗಳು...

5ಜಿ ವೇಗದಲ್ಲಿ ಇಡೀ ಜಗತ್ತನ್ನು ಆವರಿಸಿ ಮೂಲೆ ಮೂಲೆಗಳಿಂದ ಕನಿಕರದ ಕಡಲು ಮನುಷ್ಯ ಜಗತ್ತಿನಲ್ಲಿ ಹರಿಯುತ್ತಿದೆ. ಇದನ್ನೆಲ್ಲಾ ನೋಡುವಾಗ ನೆನಪಿನಾಳದಿಂದ ಎದ್ದು ಬಂದ ಮತ್ತೊಂದು ಸಂಗತಿ ಒಂದು ಕ್ಷಣ ತೀವ್ರವಾಗಿ ಕಾಡಿಬಿಟ್ಟಿತು. ಇಡೀ ಜಗತ್ತು ಕೊರೊನಾ ರೋಗ ಹೋದರೆ ಸಾಕು ಎಂದು ಪ್ರಾರ್ಥಿಸುತ್ತಿದ್ದ ಹೊತ್ತಲ್ಲೂ, ಕೊರೊನಾ ಹೋಗುವುದೇ ಬೇಡ ಎಂದು ಸಿರಿಯಾದ ಜನ ಅಲ್ಲಾಹುನ ಎದುರು ಮಂಡಿಯೂರಿ ಬೊಗಸೆಯೊಡ್ಡಿದ್ದರು.

ಟೆರರಿಸಂ ಇಂಡಸ್ಟ್ರಿಯ ವ್ಯಾಪಾರಿ ಹಿತಾಸಕ್ತಿಗಾಗಿ